



# ಅತಿ ಉದ್ದದ ಗಾಜಿನ ಸೇತುವೆ!

ಚೀನಾ ದೇಶದಲ್ಲಿ, 2017ರ ಡಿಸೆಂಬರ 24ರಂದು ಕಣ್ಮನ ತಣಿಸುವ ಸುಂದರ ಸೇತುವೆಯೊಂದು ಲೋಕಾರ್ಪಣೆಗೊಂಡಿತು. ಅದು ಇಡೀ ವಿಶ್ವದಲ್ಲಿಯೇ ಅತಿ ಉದ್ದವಾದ ಗಾಜಿನ ಸೇತುವೆ ಎಂಬ ದಾಖಲೆಯನ್ನು ನಿರ್ಮಿಸಿತು. ಅದರ ಉದ್ದ 1601 ಅಡಿ. ಅಗಲ 6.5 ಅಡಿ. ಈ ಹಿಂದೆಯೂ ಅತಿ ಉದ್ದದ ಗಾಜಿನ ಸೇತುವೆಯನ್ನು ರಚಿಸಿದ್ದು ಚೀನಾ ದೇಶವೇ ಆಗಿತ್ತು. ಅದಕ್ಕಿಂತ ಉದ್ದದ ಸೇತುವೆಯನ್ನು ಕಟ್ಟಿ ಈ ಹಿಂದಿನ ತನ್ನ ದಾಖಲೆಯನ್ನು ಅದು ತಾನೇ ಮುರಿಯಿತು. ಈ ಹಿಂದೆ ದಕ್ಷಿಣ ಚೀನಾದ ಝೂಂಗ್ಜಿಜಿ ಪ್ರದೇಶದಲ್ಲಿ ಕಟ್ಟಿದ ಗಾಜಿನ ಸೇತುವೆಯ ಉದ್ದ 1410 ಅಡಿ ಇದ್ದು ಆಗ ಅದು ವಿಶ್ವ ದಾಖಲೆಯಾಗಿತ್ತು.

1.5 ಅಂಗುಲ ದಪ್ಪವಿರುವ 1077 ಗಾಜಿನ ಪಾರದರ್ಶಕ ಹಲಗೆಗಳನ್ನು ಹೊಂದಿರುವ ಈ ಹೊಸ ಸೇತುವೆಯ ಒಟ್ಟು ತೂಕ 70 ಟನ್‌ಗಳಂತೆ. ಜನ ನಡೆದಾಡಲೆಂದೇ ಮಾಡಿದ ಈ ಸೇತುವೆ ಪ್ರವಾಸಿಗರಿಗೆ ವಿಶಿಷ್ಟ ಅನುಭವವನ್ನು ನೀಡುತ್ತದೆ. ತೂಗು ಸೇತುವೆಯಂತೆ ಹಿಂದೆ ಮುಂದೆ ಹಾಗೂ ಮೇಲೆ ಕೆಳಗೆ ಹೊಯ್ದಾಡುವ ಮೂಲಕ ಜನರಿಗೆ ಅನನ್ಯ ಖುಷಿಯನ್ನು ಕೊಡುತ್ತದೆ. ಭೂಮಟ್ಟದಿಂದ 755 ಅಡಿ ಎತ್ತರದಲ್ಲಿರುವ, ಕೆಳಗೆ ಮೇಲೆ, ಅಕ್ಕಪಕ್ಕ ಇರುವ ರುದ್ರ ಮನೋಹರ ದೃಶ್ಯಗಳನ್ನು ಯಥಾವತ್ತಾಗಿ ಬಿಚ್ಚಿ ಇಡುವ, ಈ ಸೇತುವೆ ಪ್ರವಾಸಿಗರಲ್ಲಿ ಆಗಾಗ ಆತಂಕದ ಛಾಯೆಯನ್ನೂ ಮೂಡಿಸುವುದೂ ಉಂಟು.

ಹೇಬಿ ಪ್ರಾಂತದ ಸುಂದರವಾದ ಹೊಂಗ್ಯಾಗು ಪ್ರದೇಶದಲ್ಲಿರುವ ಈ ಸೇತುವೆಯ ಮೇಲೆ ಏಕಕಾಲದಲ್ಲಿ 2 ಸಾವಿರ ಜನ ಹೋಗ ಬಹುದಾದರೂ, ಅಲ್ಲಿನ ವ್ಯವಸ್ಥಾಪಕರು ಕೇವಲ 500 ಜನರಿಗೆ ಮಾತ್ರ ಅವಕಾಶ ಕೊಡುತ್ತಾರೆ. ಜನರ ಸುರಕ್ಷತಾ ದೃಷ್ಟಿಯಿಂದ ಈ ಕ್ರಮ ಕೈಗೊಂಡಿರುವುದಾಗಿ ಅವರು ಹೇಳುತ್ತಾರೆ. ಹೇಬಿ ಬೈಲು ಗ್ರುಪ್ ಎಂಬ ಕಂಪನಿ ಈ ಸೇತವೆಯನ್ನು ನಿರ್ಮಾಣ ಮಾಡಿದೆ.

■ ಸುಭಾಸ ಯಾದವಾಡ